## ವಾರದ ಪತ್ರ

### ವಿಚಿತ್ರ ಆದರೂ ನಿಜ!

ಟೀವಿ ಧಾರಾವಾಹಿಗಳನ್ನು ನೋಡುತ್ತಿದ್ದಾಗ ಗಮನಿಸಿದ ಕೆಲವು ಅಭಾಸಗಳು: ಝೀ ಕನ್ನಡದ 'ನಾನಿನ್ನ ಬಿಡಲಾರೆ'ಯ ಮಾಯಾ ಪಾತ್ರ ಮೂಲತಃ ಅನಾಥಾಶ್ರಮದಿಂದ ಬಂದಿದ್ದರೂ ಆಗರ್ಭ ಶ್ರೀಮಂತೆಯಂತೆ ವರ್ತಿಸುವುದು. 'ಶ್ರಾವಣಿ ಸುಬ್ರಹ್ಮಣ್ಯ'ದ ಮಂತ್ರಿ ವೀರಯ್ಯ, ತನ್ನ ಪತ್ನಿಯ ಅನೈತಿಕ ಸಂಬಂಧದ ಕಳಂಕ ಹೊರಿಸಿ ಶ್ರಾವಣಿಯನ್ನು ತನ್ನ ಮಗಳಲ್ಲ ಎಂದು ಹೇಳುವುದು. ಆಧುನಿಕ ವೈದ್ಯಕೀಯ ವಿಜ್ಞಾನದ ನೆರವು ಪಡೆಯದೇ ಇರುವುದು.

'ಬ್ರಹ್ಮಗಂಟು'ನಲ್ಲಿ ನರಸಿಂಹ ತಾನು ಸಂಜನಾಳ ಕೊರಳಿಗೆ ಬಲವಂತವಾಗಿ ಮಾಂಗಲ್ಯ ತೊಡಿಸಿದಾಗ ತೋರಿದ ಧೈರ್ಯ, ಸಂಜನಾ ಮನೆಗೆ ಬಂದ ಮೇಲೆ ಆಕೆಯ ಒರಟುತನವನ್ನು ಎದುರಿಸುವಲ್ಲಿ ಸೋತು ಕಾಲು ಹಿಡಿದು ಅಂಗಲಾಚುವುದು! ಇವೆಲ್ಲಾ ತಿಳಿದಿದ್ದೂ ನಿರ್ಮಾಣ ತಂಡ, ವೀಕ್ಷಕರು ಈ ಅಸಂಬದ್ಧಗಳನ್ನು ನಂಬಿದ್ದಾರೆಂದು ಭಾವಿಸಿರುವುದು!

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

### ವಿಷ ಕಕ್ಕುವ ಹೂವುಗಳು

ಇತ್ತೀಚೆಗೆ ಡಿಂಕಾ ಮೂವೀಸ್‌ನಲ್ಲಿ 'ಯಂಗ್ ಇಂಡಿಯಾ' ಸಿನಿಮಾ ಪ್ರಸಾರವಾಯಿತು. ಒಂದು ಕುಟುಂಬ ಪರಿಸರದ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಸಮಾಜಕ್ಕೆ ಹೇಳುವ ಪಾಠದಂತೆ ಅದಿತ್ತು. ಅಲಂಕಾರಕ್ಕೆ ಬಳಸುವ ಕೃತಕ ಹೂವಿನ ಹಾರಗಳು, ಪ್ಲಾಸ್ಟಿಕ್ ಪರಿಕರಗಳು, ಶೋ ಗಿಡಗಳು, ಎಲ್ಲೆಂದರಲ್ಲಿ ಬಿಸಾಡುವ ಕಸ ಇಂತಹ ಉಸಿರುಗಟ್ಟಿಸುವ ವಾತಾವರಣದಿಂದ ಆಗುವ ಅಪಾಯದ ಬಗ್ಗೆ ಕನ್ನಡಿ ಹಿಡಿದಂತಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

### ರಾಷ್ಟ್ರಮಾನ್ಯ ಸಿನಿಮಾಗಳಿಗೆ ಮನ್ನಣೆ ಸಿಗಲಿ

ಚಂದನದಲ್ಲಿ 'ಬರಗಾಲ' ಸಿನಿಮಾ ಪ್ರಸಾರವಾಯಿತು. ಈ ಚಿತ್ರದ ಕೆಲವು ಪಾತ್ರಗಳು ಇಂದಿನ ರಾಜಕಾರಣಿಗಳ ಮಾತುಗಳನ್ನು ಬಿಂಬಿಸುತ್ತಿದ್ದವು. ಕೊನೆಯಲ್ಲಿ ರಾಜಕೀಯ ಮುಖಂಡ ತನ್ನ ಆಸ್ತಿಯ ಮೌಲ್ಯ ಘೋಷಿಸಿದಾಗ ಗ್ರಾಮದ ಜನತೆಯ ಪ್ರತಿಕ್ರಿಯಿಸಿದ ರೀತಿ ಮನೋಜ್ಞವಾಗಿತ್ತು. 'ಘಟಶ್ರಾದ್ಧ', 'ನಾಂದಿ', 'ಕಾಡು', 'ವಂಶವೃಕ್ಷ' ಇಂತಹ ಸಿನಿಮಾ ಪ್ರಸಾರ ಮಾಡಲಿ ಎನ್ನುವ ವಿನಂತಿ.

—ಕಮಲಾದೇವಿ ರಾಜಶೇಖರ ಹಳ್ಳೂರ್

### ಬ್ಯಾರೇ ಮಾತಾಡಕ್ ಆಗಾಕಿಲ್ವಾ?

ಇತ್ತೀಚೆಗೆ ಟೀವಿ ಧಾರಾವಾಹಿಗಳಲ್ಲಿ ಅಗತ್ಯವಿರಲಿ, ಇಲ್ಲದಿರಲಿ ಹಳ್ಳಿಯ ಪಾತ್ರ ರೂಪಿಸಿ ಪಾತ್ರಧಾರಿಯಿಂದ ಹಳ್ಳಿ ಭಾಷೆಯನ್ನು ನುಡಿಸುತ್ತಿದ್ದಾರೆ. ಅಷ್ಟಕ್ಕೂ ಅವರ ದೃಷ್ಟಿಯಲ್ಲಿ ಹಳ್ಳಿ ಎಂದರೆ ಕೇವಲ ಮಂಡ್ಯ ಜಿಲ್ಲೆ ಮಾತ್ರ! ಅದೂ ಆ ಮಣ್ಣಿನ ಸೊಗಡಿನಿಂದ ದೂರವಾದ ಕೃತಕ ಸಂಭಾಷಣೆ. ಒಮ್ಮೆ ಪಾತ್ರಧಾರಿಗಳು ಗ್ರಾಮ್ಯ ಭಾಷೆ ಮಾತನಾಡಿದರೆ ಮಗದೊಮ್ಮೆ ಗ್ರಾಂಥಿಕವಾಗಿ ಮಾತಾಡಿ ಅಪಭ್ರಂಶಗೊಳಿಸುತ್ತಾರೆ. ಏಕೆ ಹೀಗೆ?

ಉದಾಹರಣೆಗೆ ಝೀ ಕನ್ನಡದ 'ಲಕ್ಷ್ಮೀನಿವಾಸ', 'ಅಣ್ಣಯ್ಯ', 'ಶ್ರಾವಣಿ ಸುಬ್ರಹ್ಮಣ್ಯ' ಆಗಾಕಿಲ್ಲ, ಓಯ್ತದೆ, ಬತ್ತೀಯಾ, ಕೊಡಾಕಿಲ್ವಾ, ಅಣ್ತಮ್ಮ, ಸಂದಾಕಿದ್ದೀಯ ಬುಡು ಇವು ಕೆಲವು ಸ್ಯಾಂಪಲ್. ಇದೇ ರೀತಿ ದಕ್ಷಿಣ ಕನ್ನಡ, ಹುಬ್ಬಳ್ಳಿ, ಉತ್ತರ ಕನ್ನಡ, ಬಯಲು ಸೀಮೆಯ ಭಾಷೆಗಳನ್ನೂ ಅಳವಡಿಸಿಕೊಳ್ಳಬಹುದು ಅಲ್ಲವೇ?

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

### ನಾಟಕೀಯ ಕನ್ನಡ

ಕನ್ನಡದ ಹಲವು ಧಾರಾವಾಹಿಗಳಲ್ಲಿ ನಟ ನಟಿಯರ ಬಾಯಲ್ಲಿ ಗ್ರಾಮೀಣರ ಮಾತಿನ ಧಾಟಿಯ ಸಂಭಾಷಣೆಯನ್ನು ಮಾಡಿಸುತ್ತಾರೆ. ಅದರ ಜೊತೆ ಅವರ ದೇಹ ಭಾಷೆ ಹೊಂದಾಣಿಕೆ ಆಗದೇ ನಾಟಕೀಯ ಎಂದು ಅನಿಸುತ್ತದೆ. ಇಂತಹ ಅನವಶ್ಯಕ ಪ್ರಯತ್ನಗಳು ಕಥೆ ಇನ್ನಷ್ಟು ಕೆಟ್ಟದಾಗಿ ಕಾಣಿಸುವಂತೆ ಮಾಡುತ್ತವೆ.

—ಕೆ.ಎಸ್. ಸೋಮೇಶ್ವರ

### ಸಿನಿಮಾ ಜಗತ್ತಿನ ದರ್ಶನ

ಚಂದನದ 'ವಾರದ ವ್ಯಕ್ತಿ' ಕಾರ್ಯಕ್ರಮದಲ್ಲಿ ಬೆಂಗಳೂರಿನ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಕಲಾ ನಿರ್ದೇಶಕ ಎನ್. ವಿದ್ಯಾಶಂಕರ್ ಅವರ ಸಂದರ್ಶನ ತುಂಬಾ ಚೆನ್ನಾಗಿ ಮೂಡಿಬಂತು. ಸಿನಿಮಾ ಕುರಿತು ಬರವಣಿಗೆ, ಉಪನ್ಯಾಸ, ಸಿನಿಮಾ ಸಾಹಿತ್ಯಕ ಪತ್ರಿಕೆಯ ಸಂಪಾದನೆ, ಸಿನಿಮಾ ವಿಮರ್ಶೆ, ಸೆನ್ಸಾರ್ ಬೋರ್ಡ್ ಕೆಲಸ, ಫಿಲ್ಮ್ ಸೊಸೈಟಿ ಕಾರ್ಯ ಕಿರುತೆರೆ, ಹಿರಿತೆರೆಯಲ್ಲಿ ಸಕ್ರಿಯರಾಗಿರುವ ವಿದ್ಯಾಶಂಕರ್ ಅವರ ಪರಿಚಯ ಸೂಕ್ತವಾಗಿತ್ತು.

ಸಿನಿಮಾರಂಗದ ವಿವಿಧ ಪ್ರಕಾರಗಳು, ತಾಂತ್ರಿಕತೆಯ ಪ್ರಭಾವ, ಹಿರಿತೆರೆ–ಕಿರುತೆರೆ ಬಗ್ಗೆ ವಿದ್ಯಾಶಂಕರ್ ತಿಳಿಸಿಕೊಟ್ಟರು. ಹೀಗೆ ಎಲೆ ಮರೆ ಕಾಯಿಯಂತಿರುವ ಹಲವಾರು ಪ್ರತಿಭೆಗಳನ್ನು ಸಮಾಜಕ್ಕೆ ಪರಿಚಯಿಸುತ್ತಿರುವ ಚಂದನ ವಾಹಿನಿಯ 'ವಾರದ ವ್ಯಕ್ತಿ' ಕಾರ್ಯಕ್ರಮ ಬಹಳ ಶ್ಲಾಘನೀಯ.

—ಸರಸ್ವತಿ, ಬೆಂಗಳೂರು

### ಕಲರ್ಸ್‌ನ ದಶಕದ ಸಂಭ್ರಮದಲ್ಲಿ ಶಿವಣ್ಣ 40

ಕಲರ್ಸ್ ಕನ್ನಡದಲ್ಲಿ ನಟ ಶಿವರಾಜ್ ಕುಮಾರ್ 40 ವರ್ಷದ ಸಿನಿ ಪಯಣ ಹಾಗೂ ಕಲರ್ಸ್ ವಾಹಿನಿಯ ದಶಕದ ಸಂಭ್ರಮಾಚರಣೆಯ ಸೊಗಸಾದ ವಿಶೇಷಕಾರ್ಯಕ್ರಮ ಪ್ರಸಾರ ಆಯಿತು.

ಬಹು ದಿನಗಳ ನಂತರ ಉತ್ತಮ ಮನರಂಜನೆಯ ಕಾರ್ಯಕ್ರಮ ನೀಡಿದ ವಾಹಿನಿಗೆ ಭೇಷ್ ಹೇಳಬೇಕು ಎಂದೆನಿಸುತ್ತದೆ. ವಾರಾಂತ್ಯದ ಮನರಂಜನೆ ಅಂದರೆ ಏಕರೂಪದಲ್ಲಿಯೇ ಇರುತ್ತಿದ್ದವು. ಆದರೆ, ಈ ಕಾರ್ಯಕ್ರಮ ಭಿನ್ನವಾಗಿತ್ತು. ಶಿವಣ್ಣ ತಮ್ಮ ಅಮೂಲ್ಯ ಅನುಭವಗಳನ್ನು ಹಂಚಿಕೊಂಡರು. ಅಲ್ಲದೇ ನೃತ್ಯ ಮಾಡಿ ವೀಕ್ಷಕರನ್ನು ಬೆರಗುಗೊಳಿಸಿದರು.

ಶಿವರಾಜ್ ಕುಮಾರ್ ಅವರ ಸಹೋದರಿಯರ ಸೌಜನ್ಯ ಪೂರಕ ಮಾತುಗಳನ್ನು ಕೇಳಲು ಬಹಳ ಚಂದ ಅನಿಸಿತು. ನಿರೂಪಕಿ ಅನುಪಮಾ ಗೌಡ ಅವರ ಸುಂದರ ನಿರೂಪಣೆ ಕಾರ್ಯಕ್ರಮಕ್ಕೆ ಮೆರುಗು ನೀಡಿತು

—ಆರ್. ವೀರೇಶ್ ಕುಮಾರ್, ಬೆಂಗಳೂರು

### ಶಾಲೆಗಳಿಗೂ ವಿಸ್ತಾರಗೊಳ್ಳಲಿ

ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಕ್ವಿಜ್ ಕಾರ್ಯಕ್ರಮವನ್ನು ರಾಜ್ಯದ ಮೂಲೆಮೂಲೆಯಲ್ಲಿರುವ ಗ್ರಾಮೀಣ ಶಾಲೆಗಳಿಗೆ ವಿಸ್ತರಿಸಿದರೆ ಅದರ ಪ್ರಯೋಜನ ಅಪಾರ. ಮಕ್ಕಳು ಶಾಲೆಯಿಂದ ದೂರ ಉಳಿಯುವುದನ್ನು ತಪ್ಪಿಸಬಹುದು, ಅವರ ಕಲಿಕಾ ಸಾಮರ್ಥ್ಯ ಹೆಚ್ಚಾಗುತ್ತೆ. ಶಿಕ್ಷಕರಲ್ಲಿಯೂ ಹುರುಪು ತುಂಬಬಹುದು.

ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯ ಸಂಯೋಜನೆಯಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಶಿಕ್ಷಕರನ್ನು 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ನಡೆಸಿಕೊಡುವ ಹಾಗೆ ತರಬೇತಿ ನೀಡಿದರೆ ಈ ಕಾರ್ಯಕ್ರಮ ಹೆಚ್ಚು ಪ್ರಯೋಜನ ಆಗಬಹುದು.

—ರಾಜೀವ್ ಮಾಗಲ್, ಸಕಲೇಶಪುರ

### ಶುಭಂ ಹೇಳಿದ ವಧು

ಕಲರ್ಸ್ ಕನ್ನಡದ 'ವಧು' ಇಷ್ಟು ಬೇಗ ಮುಗಿಸಿರುವುದು ತುಂಬ ಆಶ್ಚರ್ಯವನ್ನು ಹುಟ್ಟಿಸಿತು. ವಧು ಮತ್ತು ಸಮರ್ಥ್ ಭಿನ್ನಾಭಿಪ್ರಾಯವನ್ನು ಸರಿದೂಗಿಸಿ ಮತ್ತು ಪ್ರಿಯಾಂಕಾ ಮತ್ತು ಸಮರ್ಥ್ ಒಂದಾಗುವ ಹಾಗೆ ಮಾಡುವುದಕ್ಕೆ ಪುನಃ ವಧು ಕರಿಕೋಟು ಧರಿಸಿ ಶುಭಂ' ಹೇಳಿದ್ದು ನೀರಸವೆನಿಸಿತು.

—ಸೀತಾ ಕೇಶವ, ಸಿಡ್ನಿ